ಆಗೋವರೆಗೆ ಅಷ್ಟೇ. ಆಮೇಲೆ ಎಲ್ಲಾ ಸರಿ ಹೋಗುತ್ತೆ. ಒಳ್ಳೆಯ ಕೆಲಸ ಇದೆ. ನಿನ್ನದೇ ಒಂದು ಮನೇನೂ ತಗಂಡಿದ್ದೀಯಾ. ಇಬ್ಬರಿಗೂ ಕಾರುಗಳಿವೆ. ಇದಕ್ಕಿಂತ ಇನ್ನೇನು ಬೇಕು ಎಂದು ಅಮ್ಮ ಕೇಳಿದರು...' ಎಲ್ಲಾ ಹೇಳಿದ ಮೇಲೆ ನಾವು ನೋಡಿದ ಹುಡುಗನ್ನ ಮದುವೆ ಆಗಿದ್ದರೆ ನಿಂಗೆ ಹಿಂಗೆಲ್ಲ ಅನ್ನಿಸ್ತರಲಿಲ್ಲ ಅಂದರು. ಅಮ್ಮ ನಂಗೆ ಸಮಾಧಾನ ಹೇಳಿದರೋ ಅಥವಾ ಅವರ ಇಷ್ಟಕ್ಕೆ ವಿರುದ್ಧವಾಗಿ ಅಭೀನ ಮದುವೆ ಮಾಡಿಕೊಂಡೆ ಅನ್ನೋ ಬೇಸರದಿಂದ ಹಾಗೆ ಹೇಳಿದರೋ ಗೊತ್ತೇ ಆಗಲಿಲ್ಲ' ಎಂದು ಅರುಂಧತಿ ಹೇಳಿದ್ದೂ ಸಿದ್ಧಾರ್ಥನಿಗೆ ನೆನಪಾಯಿತು.

'ಅಮೆರಿಕದಲ್ಲಿರೋ ಅಕ್ಕನಿಗೆ ಫೋನ್ ಮಾಡಿ ಅವಳ ಸಜೆಷನ್ ಕೇಳಿದೆ. ಅದಕ್ಕವಳು, ಒಂದ್ಸಲ ಈ ದೇಶಕ್ಕೆ ಬಂದು ನೋಡು, ಮದುವೆ, ಕುಟುಂಬ ಎಲ್ಲ ವ್ಯವಸ್ಥೆಗಳು ಎಕ್ಕುಟ್ಟಿ ಹೋಗಿವೆ. ವಯಸ್ಸಿಗೆ ಬರ್ತಿರೊ ನನ್ನ ಇಬ್ಬರು ಹೆಣ್ಮಕ್ಕಳಿಗೆ ಏನೋ ಆಗದಂತೆ ಕಾಯ್ತ ಕೂತಿರೋದೇ ನನ್ನ ಕೆಲಸ ಆಗಿದೆ. ದೊಡ್ಡವಳಿಗೆ ಈಗ ಹದಿನಾಲ್ಕು. ಬಾಯ್‌ಫ್ರೆಂಡ್ಸ್ ಅಂತ ಹುಡುಗರ ಜತೆ ಓಡಾಡೋಕೆ ಶುರು ಮಾಡಿದ್ದಾಳೆ! ಈ ದೇಶದಲ್ಲಿ ಸೆಕ್ಸ್ ಅನ್ನೋದು ನೀರು ಕುಡಿದಷ್ಟು ಸಲೀಸು. ಕಾಲೇಜಿಗೆ ಬರೋ ಹೊತ್ತಿಗೆ ಎಲ್ಲರಿಗೂ ಆ ಎಕ್ಸ್‌ಪೀರಿಯನ್ಸ್ ಆಗಿರುತ್ತೆ. ಹುಡುಗರ ಜತೆ ಚೆಲ್ಲು ಚೆಲ್ಲಾಗಿರಬೇಡ ಅಂತ ಹೇಳಿದರೆ ಕೇಳಲ್ಲ. ಅವಳು ಏನಾದರೂ ಹೆಚ್ಚು ಕಡಿಮೆ ಮಾಡಿಕೊಂಡರೆ ಗತಿ ಏನು ಅಂತ ನಾನು ಕೇರ್ ತಗೊಳ್ತೀನಿ. ಅವಳು ಮಮ್ಮಿ ವಾಟ್ ಈಸ್ ರಾಂಗ್ ವಿಥ್ ಯೂ ಅಂತ ಹೇಳಿ ದಬಾಯಿಸ್ತಾಳೆ. ರಾತ್ರಿ ಫ್ರೆಂಡ್ಸ್‌ಗಳ ಜತೆ ಚಾಟಿಂಗ್ ಮಾಡ್ತಾಳೆ. ಈ ದೇಶ ನಮ್ಮಂತವರಿಗಲ್ಲ. ನಂಗೆ ಹೋಲಿಸಿದರೆ ನೀನೇ ಅದೃಷ್ಟವಂತೆ, ಹೆಣ್ಣು ಮಗು ಹುಟ್ಟದಿರಲಿ ಅಂತ ದೇವರನ್ನು ಬೇಡಿಕೋ ಅಂದಳು. ಗಂಡಾದರೆ ಏನೂ ತೊಂದರೆ ಇಲ್ಲವಂತೆ. ನೋಡಿಯೂ ನೋಡದಂಗೆ ಇದ್ದು ಬಿಡಬಹುದು ಅಂತ ಅಕ್ಕ ಹೇಳಿದಳು'ಎಂದು ಅವಳು ಹೇಳಿದ್ದೂ ಸಿದ್ಧಾರ್ಥನಿಗೆ ನೆನಪಾಯಿತು.

ಈ ಪ್ರಪಂಚದಲ್ಲಿ ನೆಮ್ಮದಿಯಾಗಿರುವ ಹೆಂಗಸು ಒಬ್ಬಳೂ ಇರಲಿಕ್ಕಿಲ್ಲ ಅನ್ನಿಸಿತು.

* * *

ಒಂಬತ್ತು ಗಂಟೆಗೆ ಅರುಂಧತಿಯಿಂದ ಫೋನ್ ಬಂತು. 'ಅಭಿ ವಾಟ್ಸಪ್ ಮೆಸೇಜ್ ಮಾಡಿದ್ದ!. ಸಾರಿ ಅಂತ ಒಂದೇ ಒಂದು ಪದ. ನಾನು ಅದನ್ನು ಓಪನ್ ಮಾಡಿಲ್ಲ. ಹತ್ತು ನಿಮಿಷದ ಮೊದಲು ಇನ್ನೊಂದು ಮೆಸೇಜ್ ಬಂತು. ಅದು ಸ್ವಲ್ಪ ಉದ್ದ ಇತ್ತು ಅಂತ ಓಪನ್ ಮಾಡಿದೆ.

ನೀನು ತಪ್ಪು ತಿಳ್ಕಂಡಿದ್ದೀಯಾ. ನನ್ನ ಮತ್ತು ಸುದೇಷ್ಣ ಮೇಡಂ ನಡುವೆ ನೀನು ತಿಳಕಂಡಂಗೆ ಏನೂ ಇಲ್ಲ. ಅವರು ಊಟಿಗೆ ಹೋಗ್ತಿನಿ ಅಂತ ಹೇಳೋಕೆ ಫೋನ್ ಮಾಡಿದ್ರು. ಅವರ ಮಗಳು ಅಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಓದ್ತಿದ್ದಾಳೆ. ನಾನು ದೆಹಲಿಗೆ ಬಂದೆ. ಸಂಜೆ ಮೀಟಿಂಗ್ ಮುಗಿಯುತ್ತೆ. ನಾಳೆ ಬರ್ತೀನಿ...' ಅಂತ.

ಚೆಕ್ ಮಾಡೋಣ ಅಂತ ಅವನ ನಂಬರಿಗೆ ಕಾಲ್ ಮಾಡಿ ನೋಡಿದೆ. 'ನೀಂಗಳ್ ಫೋನ್ ಪಣ್ಣ ನಂಬರ್ ರೊಂಬ ಬ್ಯುಸಿಯಾಗಿರುಕ್ಕು...' ಅಂತ ರೆಕಾರ್ಡೆಡ್ ವಾಯ್ಸ್ ಬಂತು! ಅವನೂ ಊಟಿಯಲ್ಲೇ ಇದ್ದಾನೆ. ಅವನ ಮೇಡಂ ಜತೆ ಡಿಂಗ್ ಡಾಂಗ್ ಮಾಡಿಕೊಂಡು. ನಂಗೆ ಮೈಯೆಲ್ಲ ಉರೀತಿದೆ ಸಿದ್ಧಾರ್ಥ, ಇಬ್ಬರನ್ನೂ ಸುಟ್ಟು ಬಿಡಬೇಕು ಅನ್ನಿಸ್ತಿದೆ' ಎಂದು ಹೇಳಿದ್ದನ್ನು ಕೇಳಿ ಸಿದ್ಧಾರ್ಥನಿಗೆ ನಗು ಬಂತು. ಅವಳಿಗೆ ಏನು ಹೇಳಬೇಕು ಅನ್ನೋದು ಗೊತ್ತಾಗದೆ 'ಸಮಾಧಾನವಾಗಿರು ನೀನು ತಿಳ್ಕಂಡಂಗೆ ಏನೂ ಆಗಿರಲ್ಲ' ಎಂದಷ್ಟೇ ಹೇಳಿ ಸುಮ್ಮನಾದ.

ಸಿದ್ಧಾರ್ಥ ಆಫೀಸಿಗೆ ಬರುವಷ್ಟರಲ್ಲಿ ನಾಲ್ಕು ಗಂಟೆ ದಾಟಿತ್ತು. 'ಏನ್ರೀ ಇವತ್ತು ಮಿಡ್‌ಡೇ ಮೀಟಿಂಗ್‌ಗೆ ನಿಮ್ಮ ಸೆಕ್ಷನ್‌ನಿಂದ ಯಾರೂ ಬರಲಿಲ್ಲ...' ಎಂದು ಆಫೀಸಿನ ಬಾಗಿಲಲ್ಲೇ ನಿಲ್ಲಿಸಿಕೊಂಡು ನ್ಯೂಸ್ ಎಡಿಟರ್ ನರಸಿಂಹನ್ ಕೇಳಿದರು. 'ಸರ್, ನಮ್ಮ ಚೀಫ್ ರೂಲಿಂಗ್ ಪಾರ್ಟಿಯ ನ್ಯಾಷನಲ್ ಪ್ರೆಸಿಡೆಂಟ್ ಬಂದಿದ್ದಾರೆ. ಅವರನ್ನು ಇಂಟರ್ವ್ಯೂ ಮಾಡೋಕೆ ಹೋಗ್ತೀನಿ ಅಂತ ನಂಗೆ ಫೋನ್ ಮಾಡಿ ಹೇಳಿದ್ದರು. ನಾನು ಈಗ ಬರ್ತಿದ್ದೀನಿ ಎನ್ನುತ್ತ ಅವರ ಮುಖ ನೋಡಿದ. ಮೀಟಿಂಗ್ ನೋಟ್ಸ್ ಮೇಲ್ ಮಾಡಿದ್ದೀನಿ, ಒಂದ್ಸಲ ನೋಡಿ ಎನ್ನುತ್ತ ನರಸಿಂಹನ್ ಕಾಫಿಹೌಸ್ ಕಡೆಗೆ ಹೋದರು.

ಚೀಫ್‌ನ ಬಾಸ್ಕೆಟ್‌ನಲ್ಲಿದ್ದ ಎಲ್ಲ ಸ್ಟೋರಿಗಳನ್ನು ಓದಿ ಡೆಸ್ಕ್‌ಗೆ ಮೂವ್ ಮಾಡುವ ಹೊತ್ತಿಗೆ ಆರು ಗಂಟೆಯಾಯಿತು. ಸ್ವಲ್ಪ ರಿಲ್ಯಾಕ್ಸ್ ಆಗೋಣವೆಂದು